**ಸಾಕ್ಷಿಯನ್ನು ದಿನಾಂಕ: 03-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಿಂದಃ**

1 ರಿಂದ 9 ನೇ ಪ್ರತಿವಾದಿಗಳು ನನ್ನ ಪರವಾಗಿ ಮಾಡಿಕೊಟ್ಟ ದಿನಾಂಕಃ 02-01-2006 ರ ಅಧಿಕಾರ ಪತ್ರದಲ್ಲಿ ಕರಾರು ಪತ್ರದ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ದಿನಾಂಕಃ 09-01-2006 ರ ಕ್ರಯಪತ್ರದಲ್ಲೂ ಸಹ ಆ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಸದರಿ ಅಧಿಕಾರ ಪತ್ರದ 5 ನೇ ಷರತ್ತಿನ ಪ್ರಕಾರ ನನಗೆ 1 ರಿಂದ 9 ನೇ ಪ್ರತಿವಾದಿಗಳ ಪರವಾಗಿ ಖುದ್ದಾಗಿ ಕ್ರಯಪತ್ರ ಮಾಡಿಕೊಡಲು ಅಧಿಕಾರ ಇದೆ ಎಂದು ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಸದರಿ ಷರತ್ತಿನ ಪ್ರಕಾರ ನಾನು ಮುಂದೆ ನಿಂತು ನೋಂದಣಿ ಮಾಡಿಸಿಕೊಡುವುದು ಮಾತ್ರ ನಮೂದು ಇದೆ ಎಂದರೆ ಸರಿ. ಸದರಿ ಜಿ.ಪಿ.ಎ ಆಧಾರದ ಮೇಲೆ ಕ್ರಯಪತ್ರ ಮಾಡಿಕೊಡಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಜಿ.ಪಿ.ಎ ಮಾಡಿಕೊಡುವ ಸಮಯದಲ್ಲಿ ದಾವಾ ಸ್ವತ್ತಿನ ಮೂಲದ ಬಗ್ಗೆ ವಿಚಾರಿಸಿರುತ್ತೇನೆ. ಪ್ರತಿವಾದಿಗಳು ಬೇರೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಹಾಗೂ ಕರಾರು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದು ಖಚಿತಪಡಿಸಿಕೊಂಡು ಜಿ.ಪಿ.ಎ ಮಾಡಿಕೊಂಡಿರುತ್ತೇನೆ. ಆ ಬಗ್ಗೆ ನಾನು ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ.

ಪ್ರತಿವಾದಿಗಳು ದಿನಾಂಕಃ 28-10-2005 ರಂದು ನಾರಾಯಣಸ್ವಾಮಿಯವರಿಗೆ ಒಂದು ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರದ ಆಧಾರದ ಮೇರೆಗೆ ಪ್ರತಿವಾದಿಗಳು ಸದರಿ ನಾರಾಯಣಸ್ವಾಮಿಯ ಜೊತೆ ಸೇರಿ ದಿನಾಂಕಃ 10-04-2006 ರಂದು ವಾದಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಆಮೇಲೆ ಗೊತ್ತಾಯಿತು. ಅದಕ್ಕೂ ಮೊದಲೇ ನನ್ನ ಮುಖಾಂತರ ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತೇನೆ. ನಾನು ಮಾಡಿಕೊಟ್ಟಿರುವ ಕ್ರಯಪತ್ರಕ್ಕೆ ಪ್ರತಿವಾದಿಗಳು ಸಮ್ಮತಿ ಸಾಕ್ಷಿ ಹಾಕಿರುವುದಿಲ್ಲ ಎಂದರೆ ಸರಿ. ವಾದಿಗೆ ಮಾಡಿಕೊಟ್ಟ ಕ್ರಯಪತ್ರಕ್ಕೆ ಪ್ರತಿವಾದಿಗಳು ಸಮ್ಮತಿ ಸಾಕ್ಷಿ ಹಾಕಿದ್ದಾರೆ ಎಂದರೆ ಇರಬಹುದು. ನಾನು ಮತ್ತು 11 ನೇ ಪ್ರತಿವಾದಿ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ದಿನಾಂಕಃ 10-04-2006 ಕ್ರಯಪತ್ರದ ಪ್ರಕಾರ ವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ ಸ್ವಾಧೀನದಲ್ಲಿ ಇರುವುದರಿಂದ ನ್ಯಾಯಾಲಯದ ದಾವಾ ಸ್ವತ್ತನ್ನು ಪರಭಾರೆ ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದು ಸ್ವತಃ ನುಡಿಯುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**